ಇಡೀ ವರ್ಷದಲ್ಲಿ ಎಲ್ಲಾ ಸೇರಿ 33,809 ಟನ್ ಖರ್ಚಾಗಿತ್ತು. ಆದರೆ, ಇವತ್ತು ಜೂನ್ ಎಂಡ್ ವರೆಗೆ 8,812 ಟನ್ ಕೊಟ್ಟಿದ್ದೇವೆ. ಆದರೆ, ಹೋದ ವರ್ಷದ್ದು ನಾವು ಲೆಕ್ಕ ಹಾಕಿದರೆ 9,952 ಟನ್ ಇತ್ತು. ಇದಕ್ಕೆ ಅದಕ್ಕೆ ಒಂದು ಸಾವಿರ ಟನ್ ವ್ಯತ್ಯಾಸ ಇದೆ. ಹೀಗಾಗಿ ತಾವೇನು ರೈಲ್ವೆ ಅಧಿಕಾರಿಗಳಿಗೆ ಹೇಳಿದಿರಿ, ನಾನು ಯಾರಿಗೂ ಸ್ಪಷ್ಟೀಕರಣ ಕೊಟ್ಟಿಲ್ಲ, ಅವರು ಸುಳ್ಳು ಹೇಳಿದ್ದಾರೆಂದು ನಾನು ಹೇಳಿಲ್ಲ ನನಗೆ ಬಂದ ಮಾಹಿತಿ, ಕಂಪನಿಯವರು ಖುದ್ದಾಗಿ ತಮ್ಮ ಲೆಟರ್‌ಹೆಡ್‌ನಲ್ಲಿ ಬರೆದುಕೊಟ್ಟಿದ್ದಾರೆ, ಒಂದನೇ ತಾರೀಖಿನಂದು ಬಿಟ್ಟಿರುವ ವ್ಯಾಗನ್ 14 ನೇ ತಾರೀಖಿಗೆ ಗುಲ್ಬರ್ಗಾಕ್ಕೆ ಹೋಗಿ ಮುಟ್ಟಿದೆ. ಇದು ಡಿಲೇ ಏಕೆ ಆಯಿತು ಎನ್ನುವ ನಿಟ್ಟಿನಲ್ಲಿ ನಾವು ಕೇಳಿದ್ದೇವೆ. ಹಾಗಾಗಿ, ಅವರು ಸುಳ್ಳು ಹೇಳಿದ್ದಾರೆಂದು ನಾನು ಯಾರಿಗೂ ಸ್ಪಷ್ಟೀಕರಣ ಕೊಟ್ಟಿಲ್ಲ. ಈ ರೀತಿ ಡಿಲೇ ಮಾಡಬಾರದು, ಬಹಳ ತೀರ್ವಗತಿ ಯಲ್ಲಿ ರೈತರ ಪರವಾಗಿ ಕೆಲಸ ಮಾಡಬೇಕೆಂದು ಕೇಳಿಕೊಂಡಿದ್ದೇನೆ. ಮತ್ತು ಸನ್ಮಾನ್ಯ ಕೇಂದ್ರ ಕೃಷಿ ಸಚಿವರ ಗಮನಕ್ಕೂ ನಾನು ತಂದಿದ್ದೇನೆ. ಹಾಗಾಗಿ, ಈ ವರ್ಷದ್ದು ಏನು ಡಿಎಪಿ ಬದಲಿ ಕಾಂಪ್ಲೆಕ್ಸ್ 20:20:0, 18:46:0, ಇವೆಲ್ಲಾ ಮಾರುಕಟ್ಟೆಯಲ್ಲಿ ಇದೆ. ನಾವು ಬಹಳಷ್ಟು ರೈತರಿಗೂ ಹೇಳುತ್ತಿದ್ದೇವೆ. ಸ್ವಲ್ಪ ಚೇಜಂಸ್ ಮೇಲೆ ಇದನ್ನು ಯೂಸ್ ಮಾಡಬಹುದು ಎಂದು ಹೇಳಿದ್ದೇವೆ. ಎಲ್ಲಾ ರೀತಿಯಿಂದಲೂ ಸಪ್ಲೈ ಮಾಡುವಂಥ ಕೆಲಸವನ್ನು ಇಲಾಖಾವತಿಯಿಂದ ತೆಗೆದುಕೊಳ್ಳುತ್ತಿದ್ದೇವೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಜಿ. ಎಸ್. ಗಡ್ಡದೇವರ್ ಮಹ್ ಗಡ್ಡಯ್ಯ ಶಿವಮೂರ್ತಯ್ಯ :-- ಈ ಸಾರಿಯೇ ನೀವು ಅಲೋಕೇಷನ್ ಎಷ್ಟು ಮಾಡುತ್ತೀರಿ ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು.

ಅಧ್ಯಕ್ಷರು :-- ಅವರು ಉತ್ತರವನ್ನು ವಿವರವಾಗಿ ಹೇಳಿದ್ದಾರೆ. ಇನ್ನೇನು ಅವರು ಹೇಳುತ್ತಾರೆ?

ಶ್ರೀ ಬಂಡೆಪ್ಪಕಾಶಂಪೂರ :-- ಗದಗ್ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಅಲೋಕೇಷನ್ ಎಷ್ಟು ಎಂಬ ಮಾಹಿತಿಯನ್ನು ಸಂಪೂರ್ಣವಾಗಿ ತಮಗೆ ಕಳುಹಿಸಿಕೊಡುತ್ತೇನೆ.

(ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) :-- ಮಾನ್ಯ ಅಧ್ಯಕ್ಷರೆ, ದಿನಾಂಕ 20-7-2007 ರಂದು 10 ನೇ ಪಟ್ಟಿಯ ಮೂಲಕ ಉತ್ತರಿಸುವ 77 ಪ್ರಶ್ನೆಗಳ ಪೈಕಿ 66 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು :-- ಮಂಡಿಸಲಾಯಿತು.

(ಇ) ಅನುಬಂಧ – I

(4) **ವರದಿಯನ್ನೊಪ್ಪಿಸುವುದು**